ಗೋಕಾಕ್ ತಾಲ್ಲೂಕಿನಲ್ಲಿ ಒಂದು ಆದಿವಾಸಿ ಕಲ್ಯಾಣ ಕಾಲೋನಿ ತೆರೆಯುವ ಬಗ್ಗೆ

೧೭೪೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನಲ್ಲಿ ನಗರದಲ್ಲಿ ಆದಿವಾಸಿ ಜನಸಂಖ್ಯೆ ಹೆಚ್ಚಾಗಿ ಇರುವುದರಿಂದ ಈ ನಗರದಲ್ಲಿ ಒಂದು ಆದಿವಾಸಿ ಕಲ್ಯಾಣ ಕಾಲೋನಿಯನ್ನು ತೆರೆಯುವ ಉದ್ದೇಶವೇನಾದರೂ ಸರ್ಕಾರದವರಿಗೆ ಇದೆಯೇ?

ಆ) ಹಾಗಿಲ್ಲದಿದ್ದಲ್ಲಿ ಸದರಿ ಜನಾಂಗದ ಜನ ಸಂಖ್ಯೆ ಆಧಾರದ ಮೇರೆಗೆ ನಗರದಲ್ಲಿ ಒಂದು ಆದಿವಾಸಿ ಕಾಲೋನಿಯನ್ನು ಪ್ರಾರಂಭಿಸಿದರಲು ಇರುವ ತೊಂದರೆಗಳೇನು?

ಇ) ಹಾಗಿದ್ದಲ್ಲಿ ಸದರಿ ನಗರದಲ್ಲಿ ಸದರಿ ಕಾಲೋನಿಯನ್ನು ಆರಂಭಿಸಲು ಸರ್ಕಾರದವರು ಕ್ರಮಕೈಗೊಳ್ಳುವರೆ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ರಾಜ್ಯದಲ್ಲಿ ಆದಿವಾಸಿ ಕಲ್ಯಾಣ ಕಾಲೋನಿ ಸ್ಥಾಪಿಸುವ ಯೋಜನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ದೇವದಾಸಿಯಂವರ ಧನ ಸಹಾಯಂ ಕುರಿತು.

೧೫೫೪. ಶ್ರೀ. ಬಿ. ಜಿ. ಜಮುಖಂಡಿ (ಮುಧೋಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ, ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ ದೇವದಾಸಿಯವರ ಸಂಖ್ಯೆ ಎಷ್ಟು?

ಆ) ಇಡೀ ರಾಜ್ಯದಲ್ಲಿ ಎಷ್ಟು ಜನ ದೇವದಾಸಿಯರ ಲಗ್ನವಾಗಿದೆ?

ಇ) ಪ್ರತಿಯೊಬ್ಬರಿಗೆ ಸರ್ಕಾರದವರು ಎಷ್ಟು ಧನ ಸಹಾಯ ನೀಡಿದ್ದಾರೆ?

ಈ) ಧನ ಸಹಾಯ ಪಡೆಯದ ದೇವದಾಸಿಯರ ಸಂಖ್ಯೆ ಎಷ್ಟು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಒಟ್ಟು ಗುರುತಿಸಲಾದ ದೇವದಾಸಿಯವರ ಸಂಖ್ಯೆ ಹೀಗಿದೆ.—

ಬಿಜಾಪುರದಲ್ಲಿ	—೧೦೨೧
ಬೆಳಗಾಂನಲ್ಲಿ	—೨೮೫೨
ಗುಲ್ಬರ್ಗಾದಲ್ಲಿ	— ೮೧

ಆ) ೮೦ ದೇವದಾಸಿಯವರಿಗೆ ವಿವಾಹವಾಗಿದೆ.

ಇ) ದಂಪತಿಗಳಿಗೆ ಪ್ರತಿಯೊಬ್ಬರಿಗೆ ೩,೦೦೦ ರೂಪಾಯಿ ಧನ ಸಹಾಯ ಕೊಡಲಾಗಿದೆ.

ಈ) ೬ ದೇವದಾಸಿ ದಂಪತಿಗಳಂ ಇನ್ನೂ ಧನ ಸಹಾಯ ಪಡೆದಿಲ್ಲ.

ಸರ್ಕಾರಿ ನಾಕರರ ಅವಧಿಪೂರ್ವ ವರ್ಗಾವಣೆ ಬಗ್ಗೆ

೧೬೭೮ (ಬಿ). ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫ನೇ ಸಾಲಿನ ಏಪ್ರಿಲ್ ೩೦ನೇ ದಿನಾಂಕದ ನಂತರ ಈತನಕ ಎಷ್ಟು ಅವಧಿ ಪೂರ್ವ ವರ್ಗಾವರ್ಗಿಗೆ ಅನುಮತಿ ನೀಡಲಾಗಿದೆ?

ಅ) ಅನುಮೆಂತಿ ನೀಡಬೇಕಾದರೆ ಅನುಸರಿಸಿದ ಮುಖ್ಯ ಸೂತ್ರಗಳೇನು?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮೇಲೆ ಹೇಳಿದ ಅವಧಿಯಲ್ಲಿ ಎಷ್ಟು ಜನರಿಗೆ ಅವಧಿ ಪೂರ್ವ ವರ್ಗಾವರ್ಗಿಗೆ ಅನುಮತಿಯನ್ನು ನೀಡಲಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಈವರೆಗೆ ೮೭ ಇಲಾಖೆಗಳಿಂದ ಪಡೆಯಲಾಗಿರುವ ಮಾಹಿತಿಯ ಪ್ರಕಾರ ೪,೩೩೪ ಸರ್ಕಾರಿ ನೌಕರರಿಗೆ ೧೯೮೫-೮೬ನೇ ಸಾಲಿನಲ್ಲಿ ಅವಧಿಪೂರ್ವ ವರ್ಗಾವರ್ಗಿಗೆ ಅನುಮತಿ ನೀಡಲಾಗಿದೆ.

ಆ) ಸಾರ್ವಜನಿಕರ ಹಿತದೃಷ್ಟಿಯನ್ನು ಹಾಗೂ ಸರ್ಕಾರಿ ನೌಕರರ ಅನುಕೂಲತೆಗಳನ್ನು ಅಳತೆ ಗೋಲನ್ನಾಗಿ ಇರಿಸಿಕೊಂಡು ಅನುಮತಿ ನೀಡುವುದನ್ನು ಪರಿಗಣಿಸಲಾಗಿದೆ. ಈ ರೀತಿ ಮಾಡುವಾಗ ಸಾರ್ವಜನಿಕ ಹಿತದೃಷ್ಟಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ.

ಇ) ಈವರೆಗೆ ೭ ಇಲಾಖೆಗಳಿಂದ ಪಡೆಯಲಾಗಿರುವ ಮಾಹಿತಿಯ ಪ್ರಕಾರ ಉತ್ತರಕನ್ನಡ ಜಿಲ್ಲೆಯಲ್ಲಿ ೧೧ ಜನರಿಗೆ ಅವಧಿ ಪೂರ್ವ ವರ್ಗಾವರ್ಗಿಗೆ ಅನುಮತಿ ನೀಡಲಾಗಿದೆ.

ಬೆಂಗಳೂರಿನ ಜೀವನ್ ಭೀಮಾನಗರದ ಸರ್ಕಾರಿ ನಿವಾಸಗಳಲ್ಲಿ ವಾಸ ಮಾಡುತ್ತಿರುವ ನೌಕರರ ಬಗ್ಗೆ

೧೭೭. ಶ್ರೀ ಜಿ. ರಾಜೂಗೌಡ (ಹಾನೂರು)—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ಜೀವನಭೀಮಾ ನಗರದ 'ಅ' ಮಾದರಿ ಮನೆಗಳಲ್ಲಿ ಹಾಲಿ ವಾಸವಾಗಿರುವ ನೌಕರರು ಸಂಖ್ಯೆ, ಹೆಸರು ವಿಳಾಸ, ನೊಂದಣಿ ಮಾಡಿದ ದಿನಾಂಕ ಹಾಗೂ ನೊಂದಣಿ ಸಂಖ್ಯೆಗಳೇನು?

ಆ) ೧೯೭೬ನೇ ಇಸವಿಯಲ್ಲಿ ಅರ್ಜಿ ಸಲ್ಲಿಸಿದ್ದರೂ ಇದುವರೆಗೆ ಮನೆ ನೀಡದ ಪ್ರಕರಣ ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಸಂಬಂಧಪಟ್ಟ ಸಚಿವರು ಅಂಥವರಿಗೆ ಮನೆ ನೀಡಬೇಕೆಂದು ಆದೇಶವಿತ್ತಿದ್ದರೂ ಅದನ್ನು ಅಧಿಕಾರಿಗಳು ಕಡೆಗಾಣಿಸಿರುವುದು ನಿಜವೇ? ಹಾಗಿದ್ದಲ್ಲಿ ಅಂಥ ಅಧಿಕಾರಿಗಳ ವಿರುದ್ಧ ಸರಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಜಲಾನಯನ, ಪ್ರದೇಶಾಭಿವೃದ್ಧಿ ಹಾಗೂ ನಿರಾವರಿ ಮಂತ್ರಿಗಳು)

ಅ) ಜೀವನ ಭೀಮಾ ನಗರದಲ್ಲಿ ಒಟ್ಟು ೪೨೪ ನೌಕರರು 'ಅ' ಮಾದರಿ ಮನೆಗಳಲ್ಲಿ ಹಾಲಿ ವಾಸವಾಗಿರುತ್ತಾರೆ. ಅವರ ಹೆಸರು, ವಿಳಾಸ, ಹಾಗೂ ನೊಂದಣಿ ಮಾಡಿದ ಮತ್ತು ಸರ್ಕಾರಿ ಮನೆ ನೀಡಿರುವ ದಿನಾಂಕದ ವಿವರ ಪಟ್ಟಿಯನ್ನು ಇದರೊಂದಿಗೆ ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.

ಆ) ೧೯೭೬ ರಲ್ಲಿ 'ಅ' ಮಾದರಿ ಮನೆಗಾಗಿ ಅರ್ಜಿ ಸಲ್ಲಿಸಿ ಹೆಸರು ನೊಂದಾಯಿಸಿದ್ದರೂ ಮನೆ ನೀಡದ ಯಾವ ನೌಕರರ ಪ್ರಕರಣವೂ ಸರಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) 'ಅ' ಪ್ರಶ್ನೆಗೆ ನೀಡಿರುವ ಉತ್ತರದನ್ವಯ ಇದು ಉದ್ಭವಿಸುವುದಿಲ್ಲ.